ಶ್ರೀ ಟಿ. ಆರ್. ಶಾಮಣ್ಣ.—ಆ ಸೊಸೈಟಿಯಲ್ಲಿ ಹಣ ಲೋಪವಾಗಿದೆ ಎನ್ನುವ ಉದ್ದೇಶ ದಿಂದ ತೀವ್ರ ಕ್ರಮ ತೆಗೆದುಕೆ ಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ತನಿಖೆ ಮಾಡಲಿಕ್ಕೆ ಡೆಪ್ಯುಟಿ ರಿಜಿಸ್ಟ್ರಾರ್ ಅವರನ್ನು ನೇಮಕ ಮಾಡಿದ್ದೇವೆ. ಅವರ ರಿಪೋರ್ಟ್ ಬಂದ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ಒಂದು ಸಂಘದ ವಿಚಾರವಾಗಿ ಒಂದು ಅರ್ಜಿ ಬಂದ ಮೇಲೆ ಅದರ ಬಗ್ಗೆ ಎಂಟು ತಿಂಗಳಾದರೂ ಇದರ ರಿಪೋರ್ಟ್ ಬರದೇ ಇದ್ದರೆ ಇದರಲ್ಲಾಗಿರುವ ಅನ್ಯಾಯ ಗಳನ್ನು ತಿಳಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂದ ಮೇಲೆ ಇಂತಹ ಸಂಘಗಳಲ್ಲಿ ಸರಕಾರ ದುರುಪಯೋಗವಾಗುವುದನ್ನು ಮುಂದೆ ತಡೆಯುವುದು ಕಷ್ಟವಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೊದಲು ಇದರ ಬಗ್ಗೆ ಅರ್ಜಿ ಬಂತು, ಅರ್ಜಿ ಬಂದ ಕೂಡಲೆ ತನಿಖೆ ಮಾಡಬೇಕೆಂದು ಇದರಲ್ಲಿರುವ ಕಮಿಟಿ ತೆಗೆಯಬೇಕೆಂದೂ ಇತ್ತು. ಅನಂತರ ಬರೀ ತನಿಖೆ ಮಾಡಿದರೆ ಸಾಕು ಕಮಿಟಿ ತೆಗೆಯುವ ಅಗತ್ಯ ವಿಲ್ಲ ಎಂದು ರಿಜಿಸ್ಟ್ರಾರ್‌ರವರು ಸೆಕ್ಷನ್ 54 ಪ್ರಕಾರ ತನಿಖೆ ಮಾಡಲು ಸೂಚನೆ ಕೊಟ್ಟಿದ್ದಾರೆ. ಮತ್ತು ಇವುಗಳನ್ನು ಮಾಡುವುದರಲ್ಲಿ ಸ್ವಲ್ಪ ಸಾವಕಾಶವಾಗಿದೆ ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಯಾವುದೇ ಕೆಲಸಕ್ಕಾಗಲೀ ಸಹಕಾರ ಸಂಘಗಳಿಗೆ ಸರಕಾರದ ಮಂಜೂರಾತಿ ಅವಶ್ಯಕವಾಗಿ ಬೇಕು. ಸರಕಾರ ಮಂಜೂರಾತಿ ಕೊಡುವುದರ ಬಗ್ಗೆ ಇಷ್ಟು ದಿನ ಗಳನ್ನು ಕೊಡಬೇಕೆಂದು ನಿಗದಿ ಮಾಡಿಸ್ಯಾರೆಯೇ ಇಲ್ಲವೇ ? ನಿರ್ದಿಷ್ಟವಾಗಿ ನಿಗದಿ ಮಾಡದೆ ಅನಿರ್ದಿಷ್ಟ ಕಾಲದವರೆಗೆ ಸರಕಾರದ ಮಂಜೂರಾತಿಗಾಗಿ ಸಹಕಾರ ಸಂಘಗಳು ಕಾಯುತ್ತ ಹೋದರೆ ಅದರ ಪ್ರಗತಿಗೆ ಧಕ್ಕೆಯಾಗುವುದಿಲ್ಲವೇ ? ಇದರ ಬಗ್ಗೆ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದೀರಿ ?

ಶ್ರೀ ಎ. ಶಂಕರ ಆಳ್ವ.—ಎಷ್ಟು ಬೇಗ ಮಂಜೂರಾತಿ ಕೊಡಬೇಕೆಂದು ಇದೆ. ಕೆಲವು ಸಂದರ್ಭಗಳಲ್ಲಿ ಇವನ್ನು ಅಧಿಕಾರಿಗಳು ತನಿಖೆ ಮಾಡಬೇಕಾಗಿ ಬರಬಹುದು, ಹಾಗೆ ಸಾವಕಾಶ ಮಾಡಿದರೆ ಸರಕಾರಕ್ಕೆ ಇಲ್ಲವೇ ಮಂತ್ರಿಗಳಿಗೆ ಮನವಿ ಮಾಡಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಕಮಿಟಿ ಸದಸ್ಯರು ದುರುಪಯೋಗ ಮಾಡಿರುವುದರಿಂದ ಇವರ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳಲು ಸೆಕ್ಷನ್ 61ರ ಪ್ರಕಾರ ಅವಕಾಶವಿದೆ. ಆ ರೀತಿ ಬೇಗನೆ ಇದರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದನ್ನು ಪರಿಶೀಲಿಸಿ ಸೆಕ್ಷನ್ 61ರ ಪ್ರಕಾರ ಯಾವ ಸದಸ್ಯರ ಮೇಲೆ ಆರೋಪ ಬರುತ್ತದೋ ಅವರ ಮೇಲೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಯಾವ ಅನುಮಾನವೂ ಇಲ್ಲ.

Sri Lal Bahadur Shastry Market at Bijapur

473. Sri J. L. KABADI (Ballol i).—

Will the Minister for Municipal Administration be pleased to state :—

(*a*) whether it is a fact that Sri Lalbahadur Shastry Market at Bijapur is going to be constructed shorty;

(*b*) if so, when it will be completed;

(*c*) the arrangement that will be made to the Cobblers who are having their shops already at the time of construction of this market;

(*d*) after construction of this market whether Government is going to give built shops to the Cobblers who are residing there;

(*e*) whether Government intends to allot shops to the Cobblers who are actually working in their homes on nominal rent;

(*f*) whether Government intends to take steps immediately to costruct shops with the compound for Cobblers to accommodate one and all Cobblers along at Girls Primary School No. 1, in front of Mahatma Gandhi Square to get good market;

(*g*) the steps taken by the Government on the letter written by the M.L. As., in this respect in the month of April or May 1972?

Sri B. BASAVALINGAPPA (Minister for Municipal Administration).—

(*a*) No.

(*b*), (*c*) and (*d*) Do not arise in view of reply to clause (*a*).

(*e*) No.

(*f*) No.

(*g*) The Administrator, C.M.C., Bijapur has been instructed to take action to get 10 feet of land along the compound of Kannada Girls School, for construction of shops to Cobblers.

ಶ್ರೀ ಜೆ. ಎಲ್. ಕಬಾಡಿ. —ಇಲ್ಲಿ ಮಾರ್ಕೆಟ್ಟು ಕಟ್ಟಲು ಇವರ ಎಸ್ಟಿಮೇಟುಗಳು ಮತ್ತು ಪ್ಲಾನುಗಳನ್ನು ತಯಾರು ಮಾಡಿರಲಿಲ್ಲವೆ ಮತ್ತು ಅದರಂತೆ ಇಲ್ಲಿ ಕಟ್ಟಬೇಕೆಂದು ಸರಕಾರ ಹೇಳಿರುವುದು ನಿಜವೇ ?

† ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ಒಂದು ಬಿಸಿನೆಸ್ ಕಾಂಪ್ಲೆಕ್ಸ್‌ನ್ನು ಕಟ್ಟಬೇಕೆಂದು ಇದರ ಪ್ಲಾನು ಹಾಗೂ ಎಸ್ಟಿಮೇಟುಗಳು ತಯಾರಾಗಿವೆ ಮತ್ತು ಸರಕಾರದ ಕಡೆಗೆ ಬಂದೂ ಇದೆ. ಆದರೆ ಅದು ಇನ್ನೂ ಮಂಜೂರಾಗಿಲ್ಲ.

ಶ್ರೀ ಜೆ.ಎಲ್. ಕಬಾಡಿ —ಹೊಸದಾಗಿ ಕಟ್ಟಡ ಕಟ್ಟುವಾಗ ಇಲ್ಲಿರುವಲ್ಲಿ ಹಾಗೂ ಪೊವಲಿಂದ ಕೆಲಸ ಮಾಡುತ್ತಿರುವ ಚಮ್ಮಾರರಿಗಾಗಿ ಬೇರೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಮೊದಲಿನಿಂದ ಅಲ್ಲಿದ್ದವರಿಗೆ ಬೇರೆ ಮಾಡುವಾಗ ಅದರ ವ್ಯವಸ್ಥೆ ಯನ್ನೂ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಮುನಿಸಿಪಲ್ ಕೌನ್ಸಿಲರ್‌ನವರು ಇಲ್ಲಿರುವ ಶಾಲಾ ಕಟ್ಟಡದ ಬಳಿ ಹತ್ತು ಆಡಿ ಜಮೀನು ಪಡೆದು ಇಲ್ಲಿರುವ ಚಮ್ಮಾರರುಗಳಿಗೆ ಅಂಗಡಿ ಕಟ್ಟಿಕೊಳ್ಳಲು ಸರಕಾರದ ಉದ್ದೇಶಿಸಿದೆಯೇ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಇಲ್ಲಗೆ ಹೋಗಿ ಸ್ಥಳ ಪರಿಶೀಲನೆ ಮಾಡಿ ಬಂದಿದ್ದೇನೆ. ಇದರ ಬಗ್ಗೆ ಇಲ್ಲಿನ ಅಡಳಿತಾಧಿಕಾರಿಗಳಿಗೂ ಸೂಚನೆ ಕೊಟ್ಟು ಬಂದಿದ್ದೇನೆ. ಅದರ ಪ್ರಕಾರ ಜಾಗ್ರತೆ ವ್ಯವಸ್ಥೆ ಮಾಡಿ ಕೆಲಸ ಮಾಡಿಸುತ್ತೇನೆ.

Externment of a Communist Leader from Chitradurga District

688. **Sri M. S. KRISHNAN** (Malleswaram).—

Will the Chief Minister be pleased to state :—

(*a*) whether the Government is aware that Shri Pampapathy, Municipal Councillor and Leader or the Communist party of India in Davanagere, has been issued with a show cause notice by the